# ಕರ್ನಾಟಕ ಸರ್ಕಾರ

## ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

### ಪತ್ರಿಕಾ ಪ್ರಕಟಣೆ

### ಉದ್ಯೋಗ ಶಿಕ್ಷಣ ಯೋಜನೆ.

ಒಂದು ಲಕ್ಷ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ, ಕೈಗಾರಿಕೆ ಮತ್ತು ಇತರ ಕ್ಷೇತ್ರಗಳಲ್ಲಿ, ಬೇಡಿಕೆಯನುಸಾರವಾಗಿ, ಕೈಗಾರಿಕೆ ಮತ್ತು ಇತರೆ ಸಂಸ್ಥೆಗಳ ಮೂಲಕ 3 ರಿಂದ 12 ತಿಂಗಳ ಅವಧಿಯ ವೃತ್ತಿ ನಿರತ ತರಬೇತಿಯನ್ನು ನೀಡಲು ಉದ್ದೇಶಿಸಿದೆ. ವಿಶೇಷವಾಗಿ ಇಂಜಿನಿಯರಿಂಗ್, ಮುದ್ರಣ, ಸಿದ್ದ ಉಡುಪು ಮತ್ತು ಜವಳಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇತ್ಯಾದಿ ವೃತ್ತಿಗಳಲ್ಲಿ ತರಬೇತಿಯನ್ನು ನೀಡಲಾಗುವುದು.

ತರಬೇತಿ ಅವದಿಯಲ್ಲಿ ಸರ್ಕಾರದ ವತಿಯಿಂದ ಮಾಹೆಯಾನ ರೂ. 750/– ಮತ್ತು ತರಬೇತಿ ನೀಡುವ ಸಂಸ್ಥೆಗಳಿಂದ ರೂ. 750/– ಗಳ ಶಿಷ್ಯವೇತನವನ್ನು ನೀಡಲಾಗುವುದು. ಆಯ್ಕೆಯಾದ ಅರ್ಹ ಅಭ್ಯರ್ಥಿಗಳು ಸರ್ಕಾರದ ಯಾವುದೇ ಯೋಜನಯಡಿಯಲ್ಲಿ ಸುಸ್ತಿದಾರರಾಗಿರಬಾರದು.

**ಅಭ್ಯರ್ಥಿಯ ಅರ್ಹತೆ:**

ವಯಸ್ಸು – 18 ರಿಂದ 35 ವರ್ಷ (ಸಾಮಾನ್ಯ ವರ್ಗ)/
ಪ.ಜಾ. ಪ.ಪಂ./ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ 40 ವರ್ಷಗಳು

ವಿದ್ಯಾರ್ಹತೆ – ಕನಿಷ್ಠ 7ನೇ ತರಗತಿ (ಉತ್ತೀರ್ಣ/ಅನುತ್ತೀರ್ಣ)
ಐ.ಟಿ.ಐ./ಡಿಪ್ಲೊಮಾ/ಪದವೀದರರಿಗೆ ಹಾಗೂ ಉನ್ನತ ಶೈಕ್ಷಣಿಕ ಅರ್ಹತೆ ಪಡೆದವರಿಗೆ ಆದ್ಯತೆ ನೀಡಲಾಗುವುದು.

ಇಚ್ಛೆಯುಳ್ಳ ಅಭ್ಯರ್ಥಿಗಳು ನಿಗದಿತ ನಮೂನೆಯ ಅರ್ಜಿಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಉಚಿತವಾಗಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಪೂರ್ಣ ಮಾಹಿತಿಯೊಂದಿಗೆ ದಿನಾಂಕ: 30.09.2006 ರ ಒಳಗೆ ಸಲ್ಲಿಸುವುದು. ***ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ವೆಬ್‌ಸೈಟ್ www.karnatakaindustry.gov.in ಸಂಪರ್ಕಿಸುವುದು.***

ವಿಶೇಷ ಸೂಚನೆ: ಆಯ್ಕೆಯಾದ ಅಭ್ಯರ್ಥಿಗಳನ್ನು ವೃತ್ತಿ ಆಧಾರಿತ ಕ್ಷೇತ್ರಗಳಲ್ಲಿ ಸ್ಥಳೀಯ ಕೈಗಾರಿಕೆ/ಸಂಸ್ಥೆಗಳಿಗೆ ನಿಯೋಜಿಸಲಾಗುವುದು. ಒಂದು ವೇಳೆ ಸ್ಥಳೀಯ ಕೈಗಾರಿಕೆ/ಸಂಸ್ಥೆಗಳಲ್ಲಿ ತರಬೇತಿಗೆ ಅವಕಾಶವಿಲ್ಲದಿದ್ದ ಸಂದರ್ಭದಲ್ಲಿ ಅಭ್ಯರ್ಥಿಗಳು ನೆರೆಯ ಪ್ರದೇಶದಲ್ಲಿ ಸ್ವಂತ ಖರ್ಚಿನಲ್ಲಿ ತರಬೇತಿಗೆ ಹಾಜರಾಗಲು ಸಿದ್ದರಿರಬೇಕು.